ಹೊನ್ನಮ್ಮನಹಳ್ಳದಿಂದ ಚಿಕ್ಕಮಗಳೂರು ನಗರಕ್ಕೆ ನೀರು ಸರಬರಾಜು ಯೋಜನೆ ಬಗ್ಗೆ

೩೩೮. ಶ್ರೀ ಬಿ. ಬಿ. ಶಂಕರ್ (ಚಿಕ್ಕಮಗಳೂರು).— ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹೊನ್ನಮ್ಮನಹಳ್ಳದಿಂದ ಚಿಕ್ಕಮಗಳೂರು ನಗರಕ್ಕೆ ನೀರು ಸರಬರಾಜು ಯೋಜನೆಯು ಆಡಿಗಲ್ಲನ್ನು ರಾಷ್ಟ್ರದ ಪ್ರಧಾನ ಮಂತ್ರಿಗಳೇ ಹಾಕಿದ್ದು ಸರಕಾರದವರ ಗಮನಕ್ಕೆ ಬಂದಿದೆಯೆ ?

ಆ) ಹಾಗಿದ್ದಲ್ಲಿ ಈ ಯೋಜನೆ ಯಾವ ಹಂತದಲ್ಲಿದೆ ಮತ್ತು ಇದಕ್ಕೆ ತಗಲುವ ವೆಚ್ಚವೆಷ್ಟು ?

ಇ) ಈ ಯೋಜನೆಯ ರೂಪರೇಷೆಗಳೇನು ಹಾಗೂ ಆರಂಭಿಸಲು ಆಗುತ್ತಿರುವ ವಿಳಂಬಕ್ಕೆ ಕಾರಣವೇನು ?

ಶ್ರೀ ಎಂ. ಲಕ್ಷ್ಮೀಸಾಗರ್ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು).—

ಅ) ಹೌದು.

ಆ) ಹೊನ್ನಮ್ಮನಹಳ್ಳದಿಂದ ಚಿಕ್ಕಮಗಳೂರು ನಗರಕ್ಕೆ ನೀರು ಸರಬರಾಜು ಮಾಡುವ ಯೋಜನೆಗೆ ೫೦ ಕೋಟಿ ರೂ.ಗಳು ವೆಚ್ಚವಾಗುವುದೆಂದು ಅಂದಾಜು ಮಾಡಲಾಗಿದ್ದು ಆರ್ಥಿಕವಾಗಿ ಭಾರಿ ದುಬಾರಿ ಯೋಜನೆಯೆಂದು ತೀರ್ಮಾನಿಸಲಾಗಿದೆ. ಆದ ಕಾರಣ ಈ ಯೋಜನೆಗೆ ಬದಲಾಗಿ ೬.೦೮ ಕೋಟಿ ರೂ.ಗಳ ಅಂದಾಜು ವೆಚ್ಚದಲ್ಲಿ ಯಗಚಿ ಜಲಾಶಯದಿಂದ ನೀರು ಸರಬರಾಜು ಮಾಡುವ ಯೋಜನೆಯೊಂದನ್ನು ತಯಾರಿಸಲಾಗಿದೆ.

ಇ) ಉದ್ಭವಿಸುವುದಿಲ್ಲ,

ಶ್ರೀ ಬಿ. ಬಿ. ಶಂಕರ್ — ಸನ್ಮಾನ್ಯ ಅಧ್ಯಕ್ಷರೇ, ಈ ಯೋಜನೆಯನ್ನು ಯಾವಾಗ ಪ್ರಾರಂಭ ಮಾಡುತ್ತೀರಿ ? ಎಷ್ಟನೆಯ ಇಸವಿಯಲ್ಲಿ ಪೂರ್ಣಗೊಳಿಸುತ್ತೀರಿ ? ನೀರಿನ ಸಮಸ್ಯೆಯನ್ನು ತಕ್ಷಣವೇ ಪರಿಹಾರ ಮಾಡಲಿಕ್ಕಾಗಿ ಜಿಲ್ಲಾಧಿಕಾರಿಗಳಿಗೆ ಸೂಚನೆ ಏನಾದರೂ ಕೊಟ್ಟಿದ್ದೀರಾ ?

ಶ್ರೀ ಎ ಲಕ್ಷ್ಮೀಸಾಗರ್.—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ೩೩೪ರ ನಿಯಮದ ಮೇರೆಗೆ ಇದೇ ಪ್ರಶ್ನೆಯನ್ನು ಕೇಳಿದಾಗ ಸವಿಸ್ತಾರವಾಗಿ ಹೇಳಿಕೆ ನೀಡಿದ್ದೇನೆ. ಈಗ ಎರಡು ಮಾರ್ಗಗಳಿಂದ ನೀರು ಸರಬರಾಜು ಇದೆ, ಒಂದು ಕೊಳವೆ ಬಾವಿಗಳ ಮೂಲಕ ಮತ್ತೊಂದು ಹಿರೇಕೊಳಲು ಕೆರೆಯಿಂದಲೂ ನೀರು ಸರಬರಾಜು ಇದೆ. ಯಗಚಿ ಜಲಾಶಯದಿಂದ ೩೦೦ ಟಿ.ಎಂ.ಸಿ.ಫಿಟ್. ನೀರು ಒದಗಿಸುವ ಯೋಜನೆಯೊಂದನ್ನು ತಯಾರಿಸಲಾಗಿದೆ, ಅಲ್ಲಿ ಈ ನೀರು ನಿರಾಪರಿಗೆ ಖಾತ್ರಿಗಾಗುತ್ತಿಲ್ಲ ಎನ್ನುವ ಅಂಶವೂ ಕೂಡ ಇದೆ. ಸದ್ಯಕ್ಕೆ ಕುಡಿಯುವ ನೀರಿನ ಬವಣೆ ಊರಿನಲ್ಲಿಲ್ಲ ಎಂದು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಚಿಕ್ಕಮಗಳೂರಿನಲ್ಲಿ ೬೨,೦೦೦ ಜನ ಇದ್ದಾರೆ. ೯೫ ಕೊಳವೆ ಬಾವಿಗಳನ್ನು ಹಾಕಿಸಲಾಗಿದೆ. ೭೦೦ ಜನಕ್ಕೆ ಒಂದರಂತೆ ಕೊಳವೆ ಬಾವಿ ಇದೆ. ಯಾವ ಊರಿನಲ್ಲಿಯೂ ಇಷ್ಟು ಹೆಚ್ಚಿನ ಸಂಖ್ಯೆಯಲ್ಲಿ ಕೊಳವೆ ಬಾವಿಗಳನ್ನು ಹಾಕಿಲ್ಲ. ಕುಡಿಯುವ ನೀರಿಗೆ ತೊಂದರೆ ಆದರೆ ನಾವು ನೀವು ಮುನಿಸಿಪಾಲಿಟಿಯವರು ಎಲ್ಲರೂ ಸೇರಿ ಪರಿಹಾರ ಮಾಡೋಣ. ಒಂದು ಹದ ಮಳೆ ಬಂದರೆ, ಹಿರೇಕೊಳಲು ತುಂಬುತ್ತೆ.

ಅಧ್ಯಕ್ಷರು.— ಪ್ರಶ್ನೆ ಸಂಖ್ಯೆ ೧೩೫ (೩೮೧) ಎನ್. ಎಂ. ಆಡ್ಯಾಂತಯ್ಯ, ಗೈರುಹಾಜರಿ.

ದಾವಣಗೆರೆಯಲ್ಲಿ ಅಡಿಷನಲ್ ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ನ್ಯಾಯಾಲಯಗಳ ಸ್ಥಾಪನೆ

೩೯೦. ಶ್ರೀ ಬಿ. ಜಿ. ಕೊಟ್ರಪ್ಪ (ಹರಿಹರ).— ಮಾನ್ಯ ನಗರಾಭಿವೃದ್ಧಿ ಹಾಗೂ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಾವಣಗೆರೆನಗರದಲ್ಲಿ ಹೆಚ್ಚಿನ ಜಿಲ್ಲಾ ಮತ್ತು ಅಪರಾಧ ನ್ಯಾಯಾಲಯಗಳನ್ನು ಸ್ಥಾಪಿಸಲು ಸರ್ಕಾರದವರು ಉದ್ದೇಶಿಸಿದ್ದಾರೆಯೇ ?